



**ನೀವು ತೀರ್ಥಹಳ್ಳಿಯ ಕವಲೇದುರ್ಗವನ್ನು ನೋಡಲು ಬೇಸಗೆಯಲ್ಲಿ ಬಂದರೆ ಇಲ್ಲಿನ ಸೆಕೆಗೆ ಕೋಟೆಗಿಂತ ಬಿಸಿಲೇ ಹೆಚ್ಚು ಕಾಡಿ ಸಾಕುಸಾಕಾಗುತ್ತದೆ. ಮಳೆಗಾಲದಲ್ಲಿ ಇಲ್ಲಿಗೆ ಬಂದಿರಾ – 'ಆಹಾ ಇದೇನು ಸ್ವರ್ಗ' ಅಂತ ಒಂದು ಮಳೆ ಹಾಡು ಗುನುಗದೇ ಇರಲ್ಲ.**

**■ ಪ್ರಸಾದ್ ಶೆಣೈ ಆರ್.ಕೆ.**

ಧೋ... ಧೋ... ಮಳೆಗೆ ಕೋಟೆಯ ಕಲ್ಲೆಲ್ಲವೂ ಒದ್ದೆಯಾಗಿದ್ದವು. ಸುತ್ತಲಿನ ಜಗ ಹಸಿರಿನ ಮುದ್ದೆಯಾಗಿತ್ತು. ಪಾಚಿಗಟ್ಟಿದ ಕಲ್ಲುಕಂಬಗಳು, ಐತಿಹಾಸಿಕ ಈಜುಕೊಳಗಳು. ನಾಟ್ಯ ಮಾಡುತ್ತ ನಿಂತ ಕಿನ್ನರಿಯರ ಕಲ್ಲಿನ ಮೂರ್ತಿ, ಕಲ್ಲಿನ ದೊಡ್ಡ ಹೂಜಿಗಳು, ಮೆಟ್ಟಿಲುಗಳು ನಮ್ಮನ್ನು ಸ್ವಾಗತಿಸಿದವು. ಅದನ್ನೆಲ್ಲಾ ನೋಡುತ್ತ ನಿಂತಾಗ ಸುರಿದ ಮಳೆಗೆ ಕಾಡೇ ಬೋರೆಂದು ಅಬ್ಬರಿಸಿ ಸಂಭ್ರಮಿಸಿತು. ಆ ಮಳೆಯ ಜೊತೆಗೆ ಮಾತುಕತೆಯ ನಂತರ ಕೋಟೆಯ ಚಂದವೇ ಬೇರೆ ರೀತಿ ಕಂಡಿತು. ಈ ಕೋಟೆಯ ಭವ್ಯ ಪರಂಪರೆ, ಇತಿಹಾಸದ ಮೆಲುಕು ಇನ್ನಷ್ಟು ಕಾಡಬೇಕಿದ್ದರೆ ಮಳೆ ಬಂದು ನಿಂತ ಮೇಲೆ ಕೋಟೆ ನೋಡಬೇಕು.

ಮಳೆ ಬಿಟ್ಟ ಕೂಡಲೇ ಇಡೀ ಕಾಡಿಗೆ ಕಾಡೇ ಮಂಜು ತುಂಬಿಕೊಂಡು ಹಸಿರೆಲ್ಲಾ ಮಂಜಾಗಿ ದಾರಿಯೇ ಮಂಗಮಾಯವಾಗುತ್ತದೆ. ಇಲ್ಲಿ ಮಂಜು ಎಷ್ಟು ಗಾಢವಾಗಿ ಹಬ್ಬಿಕೊಳ್ಳುತ್ತದೆಂದರೆ, ಆಳವಾದ ಪ್ರಪಾತ ಕೂಡ ಪ್ರಪಾತ ಅನ್ನಿಸದೇ ಹಾಸಿದ ಬಿಳಿಕಂಬಳಿಯಂತೆ ಕಾಣುತ್ತದೆ. ಅದು ಕಂಬಳಿ ಎಂದುಕೊಂಡು ಅದರ ಮೇಲೆ ಕಾಲಿಟ್ಟರೆ ಸೀದಾ ಪ್ರಪಾತಕ್ಕೇ!

ನಾವು ಕೋಟೆಯ ಕಲ್ಲುಗಳ ಮೇಲೆ ಕೊಂಚ ಹೊತ್ತು ಮಾತಾಡದೇ ಕೂತಾಗ ಸಿಳ್ಳಾರ ಹಕ್ಕಿ ಸುಶ್ರಾವ್ಯವಾಗಿ ಸಿಳ್ಳೆ ಹಾಕತೊಡಗಿತ್ತು. ಅದರ ಜೊತೆ ಬೀಸಿ ಬೀಸಿ ಬರುವ ಮಂಜು ಮಳೆ ಮಿಶ್ರಿತ ಗಾಳಿ ನಮ್ಮನ್ನು ಜೋಕಾಲಿಯಂತೆ ಜೀಕಿಸುತ್ತಿತ್ತು. ಇದೇ ಮಂಜಿನ ಮುದ್ದೆಯಲ್ಲಿ ಕೂತ ಹಸಿರು ಹುಲ್ಲಿನ ಪಾಪದ ಹಾವು (green vine snake) ನಮ್ಮನ್ನು ನೋಡಿ ದಾಕ್ಷಿಣ್ಯದಿಂದ ಪೋಸು ಕೊಡತೊಡಗಿತ್ತು. ಇನ್ನೂ ಬೀಳುತ್ತಲೇ ಇದ್ದ ಮಂಜಿಗೆ ಕವಲೇದುರ್ಗ ಕೋಟೆ ಮಂಜಿನ ದುರ್ಗವಾಯಿತು.

ರಾಜಮಹಾರಾಜರು ಆಳಿದ, ಶೌರ್ಯ, ಕ್ರೌರ್ಯಗಳಿಗೆ ಸಾಕ್ಷಿಯಾಗಿದ್ದ ಕೋಟೆ ತನ್ನೆಲ್ಲ ಗತವೈಭವವನ್ನು ಮರೆತು ಮಂಜಿನ ಸೆರಗ ಹಿಡಿದು, ನಿಸರ್ಗದ ಅಪ್ಪುಗೆಯಲ್ಲಿ ಸರಿದು, ಭಗ್ನಗೊಂಡ ತನ್ನ ಮೈಯ ನೋವನ್ನು ಮರೆತು ಆನಂದದಲ್ಲಿ ಕಣ್ಮುಚ್ಚುವ ಗಳಿಗೆಯಲ್ಲಿ... ಅಮ್ಮ ಸೀರೆಯುಡುವುದನ್ನು ನೋಡುವ ಎಳೆಯ ಕಂದಮ್ಮಗಳಂತೆ ನಾವು ಮೈಮರೆತಿದ್ದೆವು. ಕಣ್ಣುಗಳು ಎವೆಯಿಕ್ಕದೆ ಮಾತಿಗೊಲಿಯದಮೃತವುಂಡ ರೋಮಾಂಚನದಲ್ಲಿ ಮುಳುಗಿದ್ದವು.

ಚಿತ್ರಗಳು ಲೇಖಕರವು


**ಆರೋಗ್ಯಕರವಾದ ಸವಿಯನ್ನು ಆನಂದಿಸಿ**

Along with HERBS
100% NATURAL

**ARECA TEA**
HEALTHY • TASTY • REFRESHING

ಇತರ ಚಹಾಗಳಿಗಿಂತ ಹೆಚ್ಚಿನ ಆ್ಯಂಟಿಆಕ್ಸಿಡೆಂಟ್ ಗುಣಗಳನ್ನು ಹೊಂದಿದೆ.
ಮಧುಮೇಹ ನಿರ್ವಹಣೆಯಲ್ಲಿ ಸಾಬೀತಾಗಿದೆ.
ಕೊಲೆಸ್ಟರಾಲ್ ಅನ್ನು ಪರಿಣಾಮಕಾರಿಯಾಗಿ ನಿರ್ವಹಿಸುತ್ತದೆ.
ಶಕ್ತಿಯನ್ನು ಹೆಚ್ಚಿಸುತ್ತದೆ.
ಒತ್ತಡವನ್ನು ನಿವಾರಿಸುತ್ತದೆ.
ದೀರ್ಘಕಾಲೀನ ಬಳಕೆಯಲ್ಲಿ ಸುರಕ್ಷಿತ.

ಅರೇಕಾ ಟೀ ಒಂದು ಉತ್ತಮ ಆಯ್ಕೆ



ಆರೋಗ್ಯಕರ • ರುಚಿಕರ • ಉಲ್ಲಾಸಕರ

5 ರುಚಿಕರ ಸ್ವಾದಗಳಲ್ಲಿ ಲಭ್ಯ
ಪುದೀನ, ಶುಂಠಿ, ರೆಗ್ಯುಲರ್, ನಿಂಬೆ ಮತ್ತು ತುಳಸಿ



WORLD'S FIRST ARECA TEA
INNOVATIVE PRODUCT OF THE YEAR 2015 MAKE IN INDIA EXCELLENCE AWARD
ENTREPRENEURIAL INNOVATION 2017
BEST AGRO FOOD STARTUP 2018

ಪ್ರಮೋಟರ್ಸ್: ಗ್ರೀನ್ ರೆಮೆಡೀಸ್, ಉಡುಪಿ
+91 820 252 9023
ಕಸ್ಟಮರ್ ಕೇರ್ ನಂ:
+91 80 2672 6337 / +91 63610 08174
ಇ ಮೇಲ್: info@arecatea.in
ಆನ್‌ಲೈನ್ ನಲ್ಲಿ ಖರೀದಿಸಿ
amazon | bigbasket | Flipkart
www.arecatea.in ನಲ್ಲೂ ಲಭ್ಯ